# ಅನುಬಂಧ ಅವಾರ್ಡ್ಸ್‌ನಲ್ಲಿ ಮನರಂಜನೆಯ ಮಹಾಪೂರ



ಕನ್ನಡ ಟೆಲಿವಿಷನ್ ಚಾನೆಲ್‌ಗಳ ಅವಾರ್ಡ್ ಕಾರ್ಯಕ್ರಮಗಳಲ್ಲೇ ಅತ್ಯಂತ ಜನಪ್ರಿಯವಾದ ಅವಾರ್ಡ್ ಕಾರ್ಯಕ್ರಮ ಅಂದರೆ ಅದು ಕಲರ್ಸ್ ಕನ್ನಡದ ಅನುಬಂಧ ಅವಾರ್ಡ್ಸ್. ಪ್ರತಿ ವರ್ಷ ಅಸಂಖ್ಯಾತ ಟೆಲಿವಿಷನ್ ವೀಕ್ಷಕರು ಕಾತರದಿಂದ ಕಾಯುವ ಈ ಪ್ರಶಸ್ತಿ ಸಮಾರಂಭ ಈ ವರ್ಷ ಸೆಪ್ಟೆಂಬರ್ 10 ಮತ್ತು 11 ರಂದು ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಯಿತು.

ಕಲರ್ಸ್ ಕನ್ನಡ ಅಂದರೆ ಸಾಕು ಗುಣಮಟ್ಟದ ಕಾರ್ಯಕ್ರಮಗಳು ಎಂದರ್ಥ. ಭರ್ಜರಿ ಧಾರಾವಾಹಿಗಳು, ಕಣ್ಣನ ಸೆಳೆಯುವ ರಿಯಾಲಿಟಿ ಶೋಗಳು, ಜನರ ಬಳಿಗೆ ತೆರಳುವ ಸಂತೆ ಕಾರ್ಯಕ್ರಮಗಳು, ಆಗಿಂದಾಗ್ಗೆ ಬರುವ ವಿಶೇಷ ಕಾರ್ಯಕ್ರಮಗಳು ಮುಂತಾದವುಗಳ ಮೂಲಕ ಜನಪ್ರಿಯವಾಗಿರುವ ಚಾನೆಲ್ ಇದು. ಕಳೆದ ಒಂದೂವರೆ ವರ್ಷಕ್ಕೂ ಹೆಚ್ಚು ಕಾಲದಿಂದ ಕನ್ನಡ ಮನರಂಜನಾ ಟೆಲಿವಿಷನ್ ಚಾನೆಲ್‌ಗಳ ಪೈಕಿ ಭಾರೀ ಅಂತರದಿಂದ ಮುಂಚೂಣಿಯಲ್ಲಿರುವ ಕಲರ್ಸ್ ಕನ್ನಡದ ಪ್ರಶಸ್ತಿ ಸಮಾರಂಭ ಎನ್ನುವಾಗ ಸಹಜವಾಗಿಯೇ ಅದರ ವೀಕ್ಷಕರಿಗೆ ಕುತೂಹಲ ಇರುತ್ತದೆ.

ಎರಡು, ಮೂರು ವರ್ಷಗಳಿಂದ ಸತತವಾಗಿ ಕಣ್ಣೆವೆಯಿಕ್ಕದೆ ನೋಡಿದ ಧಾರಾವಾಹಿಗಳಲ್ಲಿ ತಮ್ಮ ಮೆಚ್ಚಿನ ಪಾತ್ರಗಳಿವೆ. 'ಪುಟ್ಟಗೌರಿ ಮದುವೆ'ಯ ಗೌರಿ, 'ಅಗ್ನಿಸಾಕ್ಷಿ'ಯ ಸನ್ನಿಧಿ, 'ಲಕ್ಷ್ಮೀಬಾರಮ್ಮ'ದ ಗೊಂಬೆ, 'ಅಕ್ಕ'ದ ಭೂಮಿಕಾ, 'ಕುಲವಧು'ವಿನ ಧನ್ಯಾ–ಹೀಗೆ ಒಂದೊಂದು ಪಾತ್ರಕ್ಕೂ ಲಕ್ಷಾಂತರ ಸಂಖ್ಯೆಯ ಅಭಿಮಾನಿಗಳಿದ್ದಾರೆ. 'ಕಿನ್ನರಿ'ಯ ಮಣಿಯಂತೂ ಕನ್ನಡದ ಎಲ್ಲ ಟೆಲಿವಿಷನ್ ವೀಕ್ಷಕರ ಮುದ್ದಿನ ಮಣಿಯೇ ಆಗಿದ್ದಾಳೆ. ಇವರೆಲ್ಲರೂ ಪ್ರಶಸ್ತಿ ಗೆಲ್ಲಲಿ ಎಂದು ಹರಸಿ ಹಾರೈಸುವವರು ಅದೆಷ್ಟೋ ಮಂದಿ ಇದ್ದಾರೆ. ತಮ್ಮ ನೆಚ್ಚಿನ ನಟ, ನಟಿಯರಿಗೆ ಓಟ್ ಮಾಡಿದವರಿದ್ದಾರೆ. ಇವರೆಲ್ಲರ ಕುತೂಹಲವನ್ನು ತಣಿಸಿತು ಈ ಬಾರಿಯ ಅನುಬಂಧ ಅವಾರ್ಡ್ಸ್.

ಈ 'ಅನುಬಂಧ ಅವಾರ್ಡ್ಸ್' ಅಂದರೆ ಬರೀ ಪ್ರಶಸ್ತಿ ಸಮಾರಂಭವಲ್ಲ. ಕನ್ನಡ ಸಿನಿಮಾ ಮತ್ತು ಟೆಲಿವಿಷನ್ ರಂಗದ ದಿಗ್ಗಜರ ಮಹಾಸಂಗಮ. ಮನರಂಜನೆಯ ಮಹಾಪೂರವನ್ನೇ ಹರಿಸುವ ಅದ್ಭುತ ಕಾರ್ಯಕ್ರಮ. ಈ ಬಾರಿಯ ಅನುಬಂಧ ಅವಾರ್ಡ್ಸ್ ಬೆಂಗಳೂರು ಸಮೀಪದ ಬಿಡದಿಯಲ್ಲಿರುವ 'ಇನ್ನೋವೇಟಿವ್ ಫಿಲ್ಮ್ ಸಿಟಿ'ಯಲ್ಲಿ ಈಚೆಗೆ ನಡೆಯಿತು. ಕ್ರೇಜಿ ಸ್ಟಾರ್ ರವಿಚಂದ್ರನ್, ಗೋಲ್ಡನ್ ಸ್ಟಾರ್ ಗಣೇಶ್, ಶಶಿಕುಮಾರ್, ದೇವರಾಜ್, ಮುಖ್ಯಮಂತ್ರಿ ಚಂದ್ರು, ದೀಪಾ ಸನ್ನಿಧಿ, ಶ್ರದ್ಧಾ ಶ್ರೀನಾಥ್, ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಟೆಲಿವಿಷನ್‌ನ ಸೂಪರ್ ಸ್ಟಾರ್ ಜೆಕೆ, ಟೆಲಿವಿಷನ್‌ನ ಸೂಪರ್ ಆಂಕರ್ ಅಕುಲ್ ಬಾಲಾಜಿ ಮುಂತಾಗಿ ಭಾರೀ ತಾರಾಗಣವೇ ಅಲ್ಲಿ ನೆರೆದಿತ್ತು. ಮೈನವಿರೇಳಿಸುವ ನೃತ್ಯ, ಹೊಟ್ಟೆ ಹುಣ್ಣಾಗಿಸುವ ಹಾಸ್ಯ, ತಾರೆಯರ ಜೊತೆ ಮಾತುಕತೆ– ಹೀಗೆ ಅನುಬಂಧ ಅವಾರ್ಡ್ಸ್ ಮನರಂಜನೆಯ ಮಹಾಪೂರವನ್ನೇ ಒದಗಿಸಿತು. ಇದಕ್ಕೇ ಇರಬೇಕು– ಕಾರ್ಯಕ್ರಮ ನಡೆಯುವ ರಂಗಮಂದಿರ ತುಂಬಿ ತುಳುಕುತ್ತಿದ್ದರೆ ಒಳಗೆ ಬರಲಾಗದೆ ಇನ್ನೂ ಹೆಚ್ಚಿನ ಮಂದಿ ನಿರಾಸೆಯಿಂದ ವಾಪಸಾಗಿದ್ದರು.

ಈ ಅನುಬಂಧ ಅವಾರ್ಡ್ಸ್‌ನಲ್ಲಿ ಎರಡು ವಿಧ. ಮೊದಲನೆಯದು ಜನ ಮೆಚ್ಚಿದ ಪ್ರಶಸ್ತಿಗಳು ಮತ್ತು ಎರಡನೆಯದು ಮನೆ ಮೆಚ್ಚಿದ ಪ್ರಶಸ್ತಿ. ಜನ ಮೆಚ್ಚಿದ ಪ್ರಶಸ್ತಿ ಎಂದರೆ ವೀಕ್ಷಕರು ತಮ್ಮ ಮೊಬೈಲ್ ಮೂಲಕ ತಮ್ಮ ಮೆಚ್ಚಿನ ನಟ, ನಟಿಯರು ಹಾಗೂ ಧಾರಾವಾಹಿಗಳಿಗೆ ಎಸ್‌ಎಂಎಸ್ ಮೂಲಕ ಓಟ್ ಹಾಕಿ ಕೊಡುವ ಪ್ರಶಸ್ತಿ, ಮನೆ ಮೆಚ್ಚಿದ ಪ್ರಶಸ್ತಿ ಎಂದರೆ ಧಾರಾವಾಹಿಯಲ್ಲಿ ಅಭಿನಯಿಸುವ ಕಲಾವಿದರೇ ತಮ್ಮ ಸಹ ಕಲಾವಿದರಿಗೆ ಮತ ಹಾಕುವ ಮೂಲಕ ನೀಡುವ ಪ್ರಶಸ್ತಿಗಳು. ಎರಡೂ ಪ್ರತಿಷ್ಠಿತ ಪ್ರಶಸ್ತಿಗಳೇ. ಈ ಪ್ರಶಸ್ತಿ ಲಭಿಸಿದ ಕಲಾವಿದರ ಸಂಭ್ರಮಕ್ಕೆ ಪಾರವೇ ಇರುವುದಿಲ್ಲ.

ಈ ಪ್ರಶಸ್ತಿ ಸಮಾರಂಭಕ್ಕೆ ಕಲಾವಿದರು ಆಗಮಿಸಿದ ಶೈಲಿ ನೋಡುವುದೇ ಒಂದು ಸಂಭ್ರಮ. ಝಗಮಗಿಸುವ ವೇಷ ಭೂಷಣಗಳೊಂದಿಗೆ ಆಗಮಿಸುವ ಕಲಾವಿದರು ತಮ್ಮ ತಮ್ಮ ಧಾರಾವಾಹಿಯ ಇತರ ಕಲಾವಿದರ ಜೊತೆಗೆ ಕೂರುತ್ತಾರೆ. ಸತತವಾಗಿ ಎರಡನೇ ವರ್ಷ ಅನುಬಂಧ ಅವಾರ್ಡ್ಸ್‌ಗೆ 'ಮಜಾ ಟಾಕೀಸ್'ನ ಸೃಜನ್ ಲೋಕೇಶ್ ಮತ್ತು ಅವರ ತಂಡ ವಿಶೇಷ ಪೋಷಾಕಿನೊಂದಿಗೆ ಆಗಮಿಸಿ ಎಲ್ಲರ ಕಣ್ಣನ ಸೆಳೆಯಿತು. ಪ್ರತಿ ತಂಡಗಳೂ ತಮ್ಮ ತಂಡದ ಸದಸ್ಯರು ಪ್ರಶಸ್ತಿ ಗೆದ್ದಾಗ ಕುಣಿದು ಕುಪ್ಪಳಿಸಿದರು. ಶೇಕೆ ಹಾಕಿದರು. ತಾವೇ ಗೆದ್ದಷ್ಟು ಖುಷಿ ಪಟ್ಟರು. ಇಷ್ಟೇ ಅಲ್ಲದೆ ಬೇರೆ ಧಾರಾವಾಹಿಗಳ ಕಲಾವಿದರು ಪ್ರಶಸ್ತಿ ಸ್ವೀಕರಿಸಿದಾಗಲೂ ಚಪ್ಪಾಳೆ ತಟ್ಟಿದರು, ಮನಸಾರೆ ಹರಸಿದರು. ಈ ಮೂಲಕ ತಮ್ಮ ಕ್ರೀಡಾ ಸ್ಫೂರ್ತಿ ಮೆರೆದರು ಮಾತ್ರವಲ್ಲದೆ ಕಲರ್ಸ್ ಕನ್ನಡ ಸಂಸಾರದಲ್ಲಿ ಇರುವ ಅನುಬಂಧವನ್ನು ನಾಡಿಗೆ ಸಾರಿ ಹೇಳಿದರು.

ಒಟ್ಟಿನಲ್ಲಿ ಕನ್ನಡ ಟೆಲಿವಿಷನ್ ಚಾನೆಲ್‌ಗಳ ಮುಂಚೂಣಿಯಲ್ಲಿರುವ ಕಲರ್ಸ್ ಕನ್ನಡ ಗುಣಮಟ್ಟದ ಕಾರ್ಯಕ್ರಮಗಳನ್ನು ಮಾಡುವುದು ಹೇಗೆ ಎಂಬುದಕ್ಕೆ ಮೇಲ್ಪಂಕ್ತಿ ಹಾಕಿದೆ ಎಂದರೆ ತಪ್ಪಾಗಲಾರದು. ಈ ಹಿರಿಮೆಯನ್ನು ಸಾರಿ ಹೇಳುವಂತೆ ನಡೆಯಿತು ಈ ಬಾರಿಯ ಅನುಬಂಧ ಅವಾರ್ಡ್ಸ್ ಕೂಡಾ.






